**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 47/2024**

ಪಿ.ಡಬ್ಲು: 7 ಸಿಡಬ್ಲು: 9

| | | |
|---|---|---|
| ಸಾಕ್ಷಿಯ ಹೆಸರು | : | ಓಬಳೇಶ |
| ತಂದೆಯ ಹೆಸರು | : | ನಾರಾಯಣಪ್ಪ |
| ವಯಸ್ಸು | : | 31 ವರ್ಷ |
| ವೃತ್ತಿ | : | ಮೇಸ್ತ್ರಿ |
| ವಾಸಸ್ಥಳ | : | ದೇವಿನಗರ, ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: 31.12.2025

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

**1)** ನನಗೆ ಚಾಸಾ-8 ಇವರ ಪರಿಚಯವಿಲ್ಲ. ಈಗ ನೋಡುತ್ತಿರುವ ನೋಟೀಸು ಹಾಗು ಪಂಚನಾಮೆಗೆ ನಾನು ಸುಮಾರು ಒಂದುವರೆ ವರ್ಷಗಳ ಹಿಂದೆ ಮಹಿಳಾ ಪೊಲೀಸ್ ಠಾಣೆಯ ಹತ್ತಿರ ಹೆಬ್ಬೆಟ್ಟಿನ ಸಹಿ ಮಾಡಿದ್ದೇನೆ. ಸದರಿ ನೋಟೀಸನ್ನು ಈಗಾಗಲೇ ನಿಪಿ-14 ಎಂದು ಅದರಲ್ಲಿಯ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು ಅದರಲ್ಲಿಯ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-15(ಬಿ ) ಎಂದು ಗುರುತಿಸಲಾಯಿತು. ನಿಪಿ-14 ಹಾಗು 15 ಇವುಗಳನ್ನು ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ನಿಪಿ-16 ಹಾಗು 17 ಭಾವಚಿತ್ರಗಳಲ್ಲಿ ನಾನು ಇದ್ದೇನೆ. ಪೊಲೀಸರು ನಿಲ್ಲುವಂತೆ ಹೇಳಿ ಸದರಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಯಾವ ಉದ್ದೇಶಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**2)** ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗು ಯಾವುದೇ ಮೋಟಾರ್ ಸೈಕಲ್ ಜಪ್ತು ಪಡಿಸಿಕೊಂಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ಹಾಜರಿರುವ 1 ರಿಂದ 5 ನೇ ಆರೋಪಿತರ ಪರಿಚಯವಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

<u>ಪಾಟೀ ಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-</u>

**3)** ಮಹಿಳಾ ಪೊಲೀಸ. ಠಾಣೆಯ ಪೊಲೀಸರು ನಿಪಿ-**16** ಹಾಗು **17** ಭಾವಚಿತ್ರಗಳಲ್ಲಿ ಕಾಣಿಸುತ್ತಿರುವ ಮೋಟಾರ್ ಸೈಕಲಗಳನ್ನು ಜಪ್ತು ಪಡಿಸುವ ಸಲುವಾಗಿ ನಿಪಿ-**14** ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಅದರಂತೆ ದಿನಾಂಕ **21.04.2024** ರಂದು ಮುಂಜಾನೆ **11.00** ಗಂಟೆಯಿಂದ ಮಧ್ಯಾಹ್ನ **12.00** ಗಂಟೆಯವರೆಗೆ ಮಹಿಳಾ ಪೊ.ಠಾಣೆಯ ಆವರಣದಲ್ಲಿ ನನ್ನ ಹಾಗು ಚಾಸಾ-**9** ಇವರ ಸಮಕ್ಷಮ ಸದರಿ ಮೋಟಾರ್ ಸೈಕಲಗಳನ್ನು ಚಾಸಾ-**24** ಹಾಗು **26** ಇವರು ಹಾಜರುಪಡಿಸಿದಂತೆ ಅವುಗಳನ್ನು ನಿಪಿ-**15** ಪಂಚನಾಮೆಯಡಿಯಲ್ಲಿ ಜಪ್ತು ಪಡಿಸಿಕೊಂಡು, ಅದರಲ್ಲಿ ಬರೆದ ವಿಷಯಗಳನ್ನು ಓದಿ ನನ್ನ ಹಾಗು ಚಾಸಾ-**9** ಇವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನಿಪಿ-**16** ಹಾಗು **17** ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು **1** ಹಾಗು **3** ಆರೋಪಿತರ ಪರವಾಗಿ ಶ್ರೀ ಎಮ್.ಎ.ಬಿ ವಕೀಲರಿಂದ</u>

ಶ್ರೀ ಎಮ್.ಎ.ಬಿ ವಕೀಲರು ಯಾವುದೇ ಪಾಟೀಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ.ವಿ.ಬಿ ವಕೀಲರಿಂದಃ</u>

ಶ್ರೀ ಬಿ.ವಿ.ಬಿ ವಕೀಲರು ಯಾವುದೇ ಪಾಟೀಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**